ಕಂಡುಬಂದಲ್ಲಿ ಸರ್ಕಾರವು ಆಡಳಿತ ಮಂಡಳಿಗೆ ಅಥವಾ ಸಿಬ್ಬಂದಿಗೆ ಈ ಕರಾರಿನ ಮೇರೆಗೆ ಈಗಾಗಲೇ ನೀಡಲಾದ ಪೂರ್ಣ ಅಥವಾ ಭಾಗಶಃ ಅನುದಾನವನ್ನು ಮುಂದುವರೆಸದಿರುವ ಅಥವಾ ತಡೆಹಿಡಿಯುವ ಹಾಗೂ ಈ ಕರಾರಿನ ಮೇರೆಗೆ ಸರ್ಕಾರಕ್ಕೆ ಬಾಕಿ ಎಂದು ಕಂಡು ಬಂದ ಮೊಬಲಗನ್ನು ಆಡಳಿತ ಮಂಡಳಿಯಿಂದ ವಸೂಲು ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

7. ಹುದ್ದೆ ಅನುಮೋದನೆಗೊಂಡಿರುವ ಸಿಬ್ಬಂದಿಯು ಯಾವುದೇ ಹಂತದಲ್ಲಿ ತಪ್ಪು ಹೇಳಿಕೆ ಅಸತ್ಯವಾದ ಮಾಹಿತಿಯನ್ನು ಒದಗಿಸಿದಲ್ಲಿ ಅಂತಹ ನೇಮಕಾತಿಯನ್ನು ರದ್ದುಪಡಿಸಲಾಗುವುದು.
8. ಸದರಿಯವರ ವೇತನ ಅನುದಾನವು ಸರ್ಕಾರಿ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುತ್ತದೆ. ಯಾವುದೇ ಕಾರಣಕ್ಕೂ ಹಿಂದಿನ ಸೇವೆಯನ್ನು ವೇತನಾನುದಾನಕ್ಕೆ ಪರಿಗಣಿಸಲಾಗುವುದಿಲ್ಲ.
9. ಎನ್.ಸಿ.ಟಿ.ಇ 2009 ರ ನಿಯಮಾವಳಿ ಅನ್ವಯ ಪ್ರಾಂಶುಪಾಲರು ನಿಗದಿತ ವಿದ್ಯಾರ್ಹತೆಯನ್ನು ಆದೇಶ ಹೊರಡಿಸಿದ ದಿನಾಂಕದಿಂದ ಎರಡು ವರ್ಷಗಳೊಳಗಾಗಿ ಪಡೆಯತಕ್ಕದ್ದು.
10. ಸದರಿ ಬೋಧಕ ಸಿಬ್ಬಂದಿಗೆ ಸಹಾಯಾನುದಾನ ಬಿಡುಗಡೆ ಮಾಡುವ ಮುನ್ನ ಅವರು ಹೊಂದಿರುವ ವಿದ್ಯಾರ್ಹತೆ ಮತ್ತು ವಯೋಮಿತಿ ಬಗ್ಗೆ ಹಾಗೂ ಜಾತಿ ದೃಢೀಕರಣ ಪ್ರಮಾಣ ಪತ್ರಗಳ ಮೂಲ ಪ್ರಮಾಣ ಪತ್ರಗಳನ್ನು ಖುದ್ದಾಗಿ ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರ ಸಹಾಯಾನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸತಕ್ಕದ್ದು. ಮುಂದುವರೆದು ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಸಿಂಧುತ್ವ ಪ್ರಮಾಣ ಪತ್ರದ ಮೂಲ ದಾಖಲಾತಿಗಳನ್ನು ಖುದ್ದಾಗಿ ಪರಿಶೀಲಿಸಿ ಖಚಿತ ಪಡಿಸಿಕೊಳ್ಳತಕ್ಕದ್ದು.
11. ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳನ್ನು ಹೊರತು ಪಡಿಸಿ ಬೇರೆ ರಾಜ್ಯಗಳ ವಿಶ್ವ ವಿದ್ಯಾಲಯಗಳಲ್ಲಿ ಹಾಗೂ ಇನ್ನಿತರ ವಿಶ್ವವಿದ್ಯಾಲಯಗಳಲ್ಲಿ ಪಡೆದ ಅಂಕಪಟ್ಟಿಗಳನ್ನು ಖುದ್ದಾಗಿ ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು.
12. ಪ್ರತಿ ಶೈಕ್ಷಣಿಕ ವರ್ಷದಲ್ಲಿ ಉಪನ್ಯಾಸಕರಿಗೆ ನಿಗದಿತ ಕಾರ್ಯಭಾರವಿದೆಯೇ ಎಂಬ ಬಗ್ಗೆ ಕಾಲೇಜು ಶಿಕ್ಷಣ ಆಯುಕ್ತರು/ಕಾಲೇಜು ಶಿಕ್ಷಣ ಜಂಟಿ ನಿರ್ದೇಶಕರು ಪರಿಶೀಲಿಸಿದ ನಂತರ ವೇತನ ಬಿಡುಗಡೆ ಮಾಡತಕ್ಕದ್ದು.
13. ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ದಾಖಲಾತಿ ಅಥವಾ ಮಾಹಿತಿಗಳು ಮುಂದೆ ತಪ್ಪೆಂದು ಕಂಡುಬಂದಲ್ಲಿ ಸಂಬಂಧಪಟ್ಟವರ ಮೇಲೆ ಕಾನೂನು ರೀತ್ಯಾ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದು.

**ನೇಮಕಾತಿ ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿರುವ ಆದೇಶ ಮತ್ತು ಷರತ್ತುಗಳಿಗೆ ಅನುಗುಣವಾಗಿ ಶ್ರೀ ಟಿ.ಶಿವರಾಮು, ಸಹಾಯಕ ಪ್ರಾದ್ಯಾಪಕರು (ಶಿಕ್ಷಣ) ಇವರ ನೇಮಕಾತಿಯನ್ನು 16.01.2015 ರಿಂದ ಜಾರಿಗೆ ಬರುವಂತೆ ಯು.ಜಿ.ಸಿ. ವೇತನ ಶ್ರೇಣಿ 15.600 –39000 + ಎಜಿಪಿ 6000 ರಲ್ಲಿ ಕನಿಷ್ಟ ವೇತನ 15600+ ಎಜಿಪಿ 6000 ಮತ್ತು ಇತರೆ ಭತ್ಯೆಗಳನ್ನೊಳಗೊಂಡಂತೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಈ ನೇಮಕಾತಿಯು ಸರ್ಕಾರಿ ಆದೇಶ ಸಂಖ್ಯೆ ಇಡಿ/429/ಯುಆರ್.ಸಿ 2014 ಬೆಂಗಳೂರು /ದಿನಾಂಕ 16.01.2015 ರಿಂದ ಎರಡು ವರ್ಷಗಳ ಪರೀಕ್ಷಾಣಾ ಅವಧಿಯು ಇರುತ್ತದೆ ಮತ್ತು ಈ ಪರೀಕ್ಷಾಣ ಅವಧಿಯನ್ನು ಮತ್ತೊಂದು ವರ್ಷ ಮುಂದುಡುವುದಕ್ಕೆ ಕಾಲೇಜಿನ ಆಡಳಿತ ಮಂಡಳಿ ಅವಕಾಶ ಮಾಡಿಕೊಡಲಾಗಿದೆ. ಈ ನೇಮಕಾತಿಯು ಹಾಗೂ ಅನುದಾನ ಬಿಡುಗಡೆ ಮಾಡುವ ಪ್ರಕ್ರಿಯೆಯು ಕಾಲೇಜು ಶಿಕ್ಷಣ ಇಲಾಖೆಯ ಆಡಳಿತಾತ್ಮಕ ಅನುಮೋದನೆಗೆ ಒಳಪಟ್ಟಿರುತ್ತದೆ.

ರವರಿಗೆ,

ಶ್ರೀ ಟಿ.ಶಿವರಾಮು,
**S/O ತಿಮ್ಮರಾಯಪ್ಪ**
**ನಾರಾಯಣಪುರ( ಗ್ರಾಮ & ಅಂಚೆ)**
**ಕನಕಪುರ (ತಾಲ್ಲೂಕು)**
**ರಾಮನಗರ ಜಿಲ್ಲೆ-೫೬೨೧೧೭**

Chariman
Sri K V Trust
Chickballapur